# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು 1 ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು

## ದಿನಾಂಕಃ 30 ನೇ ಅಕ್ಟೋಬರ್ ಮಾಹೆ 2021

**ಉಪಸ್ಥಿತರುಃ ಶ್ರೀ ಯೋಗೇಶ.ಜೆ.** ಬಿಎ., ಎಲ್‌ಎಲ್‌ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು 1 ನೇ
ಹೆಚ್ಚುವರಿ ಜೆ.ಎಂ.ಎಫ್.ಸಿ ರಾಣೇಬೆನ್ನೂರು

## ಓ.ಎಸ್.ನಂ. 138/2019

ವಾದಿ : ವೀಣಾ ಕೋಂ ರಾಜು ಹಾದಿಮನಿ,
ವಯಸ್ಸುಃ 33 ವರ್ಷ, ಉದ್ಯೋಗಃ ಮನೆಗೆಲಸ,
ವಾಸಃ ಮಾಗೋಡ, ರಾಣೆಬೆನ್ನೂರು,
ಜಿಃ ಹಾವೇರಿ.

(ಇವರ ಪರವಾಗಿ ಶ್ರೀ ಕೆ.ಬಿ.ಬಿ., ವಕೀಲರು)

**ವಿರುದ್ಧ**

ಪ್ರತಿವಾದಿಗಳು : 1. ಬಸನಗೌಡ ಜನಕ ತಂದೆ ಶಿದ್ದನಗೌಡ
ದತ್ತಕ ತಂದೆ ಕರಬಸಪ್ಪ ಕೊಪ್ಪದ @ ಬಾಳನಗೌಡ್ರ
@ ಇಂಗಳಗೊಂದಿ, ವಯಸ್ಸುಃ 65 ವರ್ಷ,
ಉದ್ಯೋಗಃ ವ್ಯವಸಾಯ, ವಾಸಃ ಹಳೇ–ಹುಲಿಹಳ್ಳಿ,
ತಾಃ ರಾಣೆಬೆನುನ್ನಾರು, ಜಿಃ ಹಾವೇರಿ.

2. ಮಲ್ಲವ್ವ ಕೋಂ ಬಸನಗೌಡ ಕೊಪ್ಪದ @ ಬಾಳನಗೌಡ್ರ
@ ಇಂಗಳಗೊಂದಿ, ವಯಸ್ಸುಃ 58 ವರ್ಷ,
ಉದ್ಯೋಗಃ ಮನೆಗೆಲಸ, ವಾಸಃ ಹಳೇ–ಹುಲಿಹಳ್ಳಿ,
ತಾಃ ರಾಣೆಬೆನುನ್ನಾರು, ಜಿಃ ಹಾವೇರಿ.

3. ಜಗದೀಶ ಬಸನಗೌಡ ಕೊಪ್ಪದ @ ಬಾಳನಗೌಡ್ರ
@ ಇಂಗಳಗೊಂದಿ, ವಯಸ್ಸುಃ 35 ವರ್ಷ,
ಉದ್ಯೋಗಃ ವ್ಯವಸಾಯ, ವಾಸಃ ಹಳೇ-ಹುಲಿಹಳ್ಳಿ,
ತಾಃ ರಾಣೆಬೆನ್ನೂರು, ಜಿಃ ಹಾವೇರಿ.

4. ಮಂಜುನಾಥ ತಂದೆ ಬಸನಗೌಡ ಕೊಪ್ಪದ @ ಬಾಳನಗೌಡ್ರ
@ ಇಂಗಳಗೊಂದಿ, ವಯಸ್ಸುಃ 30 ವರ್ಷ,
ಉದ್ಯೋಗಃ ವ್ಯವಸಾಯ, ವಾಸಃ ಹಳೇ-ಹುಲಿಹಳ್ಳಿ,
ತಾಃ ರಾಣೆಬೆನ್ನೂರು, ಜಿಃ ಹಾವೇರಿ.

(ಪ್ರತಿವಾದಿ 1 & 2 ಪರವಾಗಿ ಶ್ರೀ ಟಿ.ಬಿ.ಸಿ., ವಕೀಲರು)
(ಪ್ರತಿವಾದಿ 3 & 4 ಪರವಾಗಿ ಶ್ರೀ ಜಿ.ಎಸ್.ಎಂ., ವಕೀಲರು)

| | |
|---|---|
| 1. ದಾವೆಯು ದಾಖಲಾದ ದಿನಾಂಕ | : 28.06.2019 |
| 2. ದಾವೆಯ ಸ್ವರೂಪ | : ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ದಾವೆ |
| 3. ವಿಚಾರಣೆ ಪ್ರಾರಂಭವಾದ ದಿನಾಂಕ | : 12.03.2020 |
| 4. ವಿಚಾರಣೆ ಮುಕ್ತಾಯವಾದ ದಿನಾಂಕ | : 27.07.2021 |
| 5. ತೀರ್ಪು ನೀಡಿದ ದಿನಾಂಕ | : 30.10.2021 |
| 6. ದಾವೆಯ ಒಟ್ಟು ಕಾಲಾವಧಿ | : ವರ್ಷ 02 ತಿಂಗಳು 04 ದಿನಗಳು 02 |

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**
**1 ನೇ ಜೆಎಂಎಫ್‌ಸಿ, ರಾಣೇಬೆನ್ನೂರು.**

## <u>ತೀರ್ಪು</u>

ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ 1/5 ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ನೀಡಬೇಕೆಂದು ಕೋರಿ ಹಾಗೂ ಪ್ರತಿವಾದಿ 1, 3 ಹಾಗೂ 4 ರವರ ನಡುವೆ ಆದಂತಹ ವಿಭಾಗ ಪತ್ರವನ್ನು ರದ್ದುಪಡಿಸಬೇಕೆಂದು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

## <u>ದಾವಾ ಶೆಡ್ಯೂಲ್ ಅ ಸ್ವತ್ತಿನ ವಿವರಃ–</u>

1. ಹಾವೇರಿ ಜಿಲ್ಲಾ, ರಾಣೇಬೆನ್ನೂರು ತಾಲ್ಲೂಕು ಹೂಲಿಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 247/1+2+3+4/ಕ ರಲ್ಲಿನ 2 ಎಕರೆ 23 ಗುಂಟೆ, ಸರ್ವೆ ನಂ. 247/1+2+3+4 ಬ/2 ರಲ್ಲಿನ 1 ಎಕರೆ 6 ಗುಂಟೆ ಹಾಗೂ ಸರ್ವೆ ನಂ. 247/5 ರಲ್ಲಿನ 2 ಎಕರೆ 20 ಗುಂಟೆ ಜಮೀನುಗಳು.

2. ಹಾವೇರಿ ಜಿಲ್ಲಾ, ರಾಣೇಬೆನ್ನೂರು ತಾಲ್ಲೂಕು ಹೂಲಿಹಳ್ಳಿ ಗ್ರಾಮ ವ್ಯಾಪ್ತಿಯ ರಿ. ಸರ್ವೆ ನಂ. 95 ರಲ್ಲಿನ ಮನೆ ನಂ. 425/1 ಹಾಗೂ ಮನೆ ನಂ. 3 ಇವು ದಾವಾ ಆಸ್ತಿಗಳಾಗಿರುತ್ತವೆ.

2. <u>ವಾದಿಯ ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ</u>

ವಾದಿ ಮತ್ತು ಪ್ರತಿವಾದಿಗಳ ಮೂಲ ಪುರುಷ 1 ನೇ ಪ್ರತಿವಾದಿ ಬಸನಗೌಡ ಜನಕ ತಂದೆ ಶಿದ್ದನಗೌಡ ದತ್ತಕ ತಂದೆ ಕರಬಸಪ್ಪ ಕೊಪ್ಪದ @ ಬಾಳನಗೌಡ್ರ @ ಇಂಗಳಗೊಂದಿ ಇವರಿಗೆ 2 ನೇ ಪ್ರತಿವಾದಿ ಮಲ್ಲಮ್ಮ ಎಂಬ ಹೆಂಡತಿ ಇದ್ದು , ಸದರಿಯವರಿಗೆ 3 ನೇ ಪ್ರತಿವಾದಿ

ಜಗದೀಶ ಮತ್ತು 4 ನೇ ಪ್ರತಿವಾದಿ ಮಂಜುನಾಥ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ವಾದಿ ವೀಣಾ ಎಂಬ ಒಬ್ಬ ಮಗಳು ಇರುತ್ತಾರೆ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದಂತಹ ಮತ್ತು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ . ದಾವಾ ಆಸ್ತಿಗೆ ಸಂಬಂಧಿಸಿದಂತೆ ದಿನಾಂಕ 23.09.2017 ರಂದು ವಾದಿ ಮತ್ತು ಪ್ರತಿವಾದಿ 2 ಮತ್ತು ಉಳಿದ ಪ್ರತಿವಾದಿಗಳ ನಡುವೆ ಯಾವುದೇ ವಿಭಾಗವಾಗಿರುವುದಿಲ್ಲ. ಆದರೆ ಪ್ರತಿವಾದಿ 1, 3 ಹಾಗೂ 4 ರವರು ವಾದಿಯ ಗಮನಕ್ಕೆ ತರದೇ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ. ಸದರಿ ಪಾಲು ವಿಭಾಗ ಪತ್ರವು ವಾದಿಯ ದಾವಾ ಆಸ್ತಿಯ ಭಾಗಾಂಶದ ಹಕ್ಕಿಗೆ ಬಾಧ್ಯಪಡಿಸುವುದಿಲ್ಲ. ಆದುದರಿಂದ ವಾದಿಯು ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಸಲ್ಲಿಸಿಕೊಂಡು ಬಂದಿರುತ್ತಾರೆ.

3. ವಾದಿಯು ಸಲ್ಲಿಸಿರುವ ಈ ದಾವೆಯನ್ನು ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಪ್ರತಿವಾದಿಗೆ ಸಮನ್ಸ ನೀಡಲಾಗಿ ಪ್ರತಿವಾದಿಗಳು ಸಮನ್ಸನ್ನು ಪಡೆದು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ. ಆದರೆ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

4. ನ್ಯಾಯಾಲಯವು ವಾದಿಯು ಸಲ್ಲಿಸಿರುವ ವಾದಪತ್ರ ಹಾಗೂ ಈ ದಾವೆಯಲ್ಲಿ ಲಭ್ಯವಿರುವ ಎಲ್ಲ ದಾಖಲಾತಿಗಳನ್ನು ಈ ನ್ಯಾಯಾಲಯವು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ದಾವೆಯನ್ನು ನಿರ್ಧರಿಸಲು ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಗಣನೆಗೆ ಉದ್ಭವಿಸುತ್ತವೆ.

**<u>ಅಂಶಗಳು</u>**

1. ದಾವಾ ಶೆಡ್ಯೂಲ್ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂಬುದನ್ನು ವಾದಿಯು ನ್ಯಾಯಾಲಯದಲ್ಲಿ ರುಜುವಾತುಪಡಿಸುತ್ತಾರೆಯೇ ?
2. ಪ್ರತಿವಾದಿ 1, 3 ಹಾಗೂ 4ರವರ ನಡುವೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ದಿನಾಂಕ 23.09.2017 ರಂದು ಆದಂತಹ ಪಾಲು ವಿಭಾಗ ಪತ್ರ ವಾದಿಯ ಭಾಗಾಂಶದ ಹಕ್ಕಿಗೆ ಬಾಧ್ಯಪಡಿಸುವುದಿಲ್ಲ ಎಂಬುದನ್ನು ವಾದಿಯು ನ್ಯಾಯಾಲಯದಲ್ಲಿ ರುಜುವಾತುಪಡಿಸುತ್ತಾರೆಯೇ ?
3. ವಾದಿಯು ಈ ದಾವೆಯಲ್ಲಿ ಕೋರಿರುವ 1/5 ಭಾಗಾಂಶವನ್ನು ಮತ್ತು ಪ್ರತ್ಯೇಕ ಸ್ವಾಧೀನಾನುಭವವನ್ನು ಪಡೆಯಲು ಅರ್ಹರೇ ?
4. ಯಾವ ಆದೇಶ ಅಥವಾ ಡಿಕ್ರಿ ?

5. ವಾದಿಯು ತನ್ನ ವಾದಪತ್ರದಲ್ಲಿ ಹೇಳಿದ ಅಂಶಗಳನ್ನು ರುಜುವಾತು ಪಡಿಸುವ ಸಲುವಾಗಿ ತನ್ನನ್ನು ತಾನು ಫ್ರಾಸಾ.1 ಎಂದು ವಿಚಾರಣೆಗೆ ಗುರಿಪಡಿಸಿಕೊಂಡಿದ್ದು, ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ.1 ರಿಂದ 8 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ವಾದಿಯ ಪರವಾಗಿ ನೀಡಲಾದ ಸಾಕ್ಷ್ಯವನ್ನು ಪರಿಗಣಿಸಿ ಮತ್ತು ವಾದಿಯ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಿ, ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶಸಂಖ್ಯೆ: 1 : ಸಕಾರಾತ್ಮಕವಾಗಿ

ಅಂಶಸಂಖ್ಯೆ: 2 : ಸಕಾರಾತ್ಮಕವಾಗಿ

ಅಂಶಸಂಖ್ಯೆ: 3 : ಸಕಾರಾತ್ಮಕವಾಗಿ

ಅಂಶಸಂಖ್ಯೆ: 4 : ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

7. **ಅಂಶ ಸಂಖ್ಯೆ :1 ಮತ್ತು 2 :** ಎರಡೂ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸಂಗತಿಗಳ ಪುನರಾವರ್ತನೆಯನ್ನು ತಡೆಯುವ ಸಲುವಾಗಿ ಒಟ್ಟಿಗೆ ಚರ್ಚೆಗೆ ತೆಗೆದುಕೊಂಡಿರುತ್ತೇನೆ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ ಎಂಬುದಕ್ಕೆ ಸಂಬಂಧಿಸಿದಂತೆ ವಾದಿಯು ನ್ಯಾಯಾಲಯಕ್ಕೆ ಹಾಜರಾಗಿ ತನ್ನನ್ನು ತಾನು ಪ್ರಾಸಾ 1 ಎಂದು ವಿಚಾರಣೆಗೆ ಗುರಿಪಡಿಸಿಕೊಂಡಿದ್ದು, ದಾವಾ ಪತ್ರದಲ್ಲಿ ಹೇಳಲಾದ ಎಲ್ಲಾ ಅಂಶಗಳನ್ನು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪುನರುಚ್ಚರಿಸಿರುತ್ತಾರೆ. 1 ನೇ ಪ್ರತಿವಾದಿಯು ವಾದಿಯ ತಂದೆಯಾಗಿದ್ದು, 2 ನೇ ಪ್ರತಿವಾದಿ ತಾಯಿಯಾಗಿರುತ್ತಾರೆ. 3 ಮತ್ತು 4 ನೇ ಪ್ರತಿವಾದಿಗಳು ವಾದಿಯ ಸಹೋದರರಾಗಿರುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ 3 ಪಹಣಿ ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ಪ್ರತಿವಾದಿ1, 3 ಮತ್ತು 4 ರವರ ಹೆಸರಿನಲ್ಲಿ ಖಾತೆ ಇರುವುದು

ಕಂಡುಬರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯದಲ್ಲಿ ನಿಪಿ 1 ರಿಂದ 3 ಎಂದು ಗುರುತಿಸಿಕೊಂಡಿರುತ್ತಾರೆ. ದಾವಾ ಅನುಸೂಚಿ 2ರ ಆಸ್ತಿಗೆ ಸಂಬಂಧಿಸಿದಂತೆ ಅಸುಂಡಿ ಗ್ರಾಮ ಪಂಚಾಯಿತಿಯವರು ನೀಡಿರುವ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ನ್ಯಾಯಾಲಯದಲ್ಲಿ ನಿಪಿ 4 ಮತ್ತು 5 ಎಂಬುದಾಗಿ ಗುರುತಿಸಿಕೊಂಡಿರುತ್ತಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುವುದು ಕಂಡುಬರುತ್ತದೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ದಾವಾ ಶೆಡ್ಯೂಲ್ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ ಎಂಬುದು ಕಂಡುಬರುತ್ತದೆ.

8. ದಾವಾ ಶೆಡ್ಯುಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿ 1, 3 ಹಾಗೂ 4ರವರು ದಿನಾಂಕ 23.09.2017 ರಂದು ನೋಂದಾಯಿತ ಪಾಲು ವಿಭಾಗಪತ್ರವನ್ನು ಮಾಡಿಕೊಂಡಿದ್ದು, ಈ ಸಂಬಂಧವಾಗಿ ವಾದಿಯು ನೋಂದಾಯಿತ ವಿಭಾಗ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯದಲ್ಲಿ ನಿಪಿ 6 ಎಂದು ಗುರುತಿಸಲಾಗಿದೆ. ಸದರಿ ದಾಖಲೆಯನ್ನು ಪರಿಶೀಲಿಸಿದಾಗ ದಾವಾ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿ 1, 3 ಹಾಗೂ 4ರವರ ನಡುವೆ ಮಾತ್ರ ವಿಭಾಗ ಪತ್ರ ಆಗಿರುವುದು ಕಂಡುಬರುತ್ತದೆ. ಸದರಿ ವಿಭಾಗ ಪತ್ರದಲ್ಲಿ ವಾದಿಗಾಗಲೀ ಪ್ರತಿವಾದಿ 2ರವರಿಗಾಗಲೀ ಯಾವುದೇ ಭಾಗಾಂಶವನ್ನು ಸದರಿ ವಿಭಾಗ ಪತ್ರದಲ್ಲಿ ನೀಡಿರುವುದು ಕಂಡುಬಂದಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಸದಸ್ಯರ ಬಗ್ಗೆ ವಾದಿಯು ತನ್ನ ಕುಟುಂಬದ ವಂಶ ವೃಕ್ಷದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ನ್ಯಾಯಾಲಯದಲ್ಲಿ ನಿಪಿ 7 ಎಂದು ಗುರುತಿಸಲಾಗಿದೆ. ಸದರಿ ದಾಖಲೆಯನ್ನು ಪರಿಶೀಲಿಸಿದಾಗ 1 ನೇ ಪ್ರತಿವಾದಿಯು ವಾದಿಯ ತಂದೆಯಾಗಿದ್ದು, 2 ನೇ ಪ್ರತಿವಾದಿ ತಾಯಿ

ಯಾಗಿರುತ್ತಾರೆ. 3 ಮತ್ತು 4 ನೇ ಪ್ರತಿವಾದಿಗಳು ವಾದಿಯ ಸಹೋದರರಾಗಿರುತ್ತಾರೆ ಎಂಬುದು ಕಂಡುಬರುತ್ತದೆ. ವಾದಿಯು ಶಾಲಾ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ವಾದಿಯ ತಂದೆಯ ಹೆಸರು ಬಸವನಗೌಡ ಬಾಳಗೌಡ್ರ ಎಂಬುದಾಗಿ ನಮೂದಾಗಿರುವುದು ಕಂಡುಬರುತ್ತದೆ. ಸದರಿ ದಾಖಲೆಯನ್ನು ನಿಪಿ 8 ಎಂದು ಗುರುತಿಸಲಾಗಿದೆ. ಸದರಿ ದಾಖಲೆಯನ್ನು ಪರಿಶೀಲಿಸಿದಾಗ ವಾದಿಯು 1 ನೇ ಪ್ರತಿವಾದಿಯ ಮಗಳಾಗಿರುತ್ತಾರೆ ಎಂಬುದು ನ್ಯಾಯಾಲಯದ ಗಣನೆಗೆ ಬರುತ್ತದೆ. ಆದುದರಿಂದ ನಿಪಿ 6 ರಂತೆ ಪ್ರತಿವಾದಿ 1, 3 ಹಾಗೂ 4 ರವರು ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ವಿಭಾಗ ಪತ್ರವನ್ನು ಮಾಡಿಕೊಂಡಿರುವುದು ಕಂಡುಬರುತ್ತದೆ. ಆದರೆ ಸದರಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಾದಿಯು ಸಹ 1 ನೇ ಪ್ರತಿವಾದಿಯ ಮಗಳಾಗಿರುವುದರಿಂದ ಹಾಗೂ 2 ನೇ ಪ್ರತಿವಾದಿಯು ಸಹ 1 ನೇ ಪ್ರತಿವಾದಿಯ ಹೆಂಡತಿಯಾಗಿರುವುದರಿಂದ ಸದರಿಯವರು ಸಹ ದಾವಾ ಆಸ್ತಿಯಲ್ಲಿ ಸಮಾನ ಭಾಗಾಂಶದ ಹಕ್ಕು ಇರುತ್ತದೆ. ಆದರೆ ಪ್ರತಿವಾದಿ 1, 3 ಮತ್ತು 4 ರವರು ವಾದಿಯನ್ನು ಮತ್ತು 2 ನೇ ಪ್ರತಿವಾದಿಯನ್ನು ಕೈಬಿಟ್ಟು ನಿಪಿ 6 ರ ವಿಭಾಗ ಪತ್ರವನ್ನು ಮಾಡಿಸಿಕೊಂಡಿರುವುದು ಕಂಡುಬರುತ್ತದೆ. ಆದುದರಿಂದ ನಿಪಿ 6 ರ ವಿಭಾಗ ಪತ್ರವು ವಾದಿ ಮತ್ತು 2 ನೇ ಪ್ರತಿವಾದಿಗೆ ದಾವಾ ಆಸ್ತಿಯ ಭಾಗಾಂಶದ ಹಕ್ಕಿಗೆ ಬಾಧ್ಯಪಡಿಸುವುದಿಲ್ಲ ಎಂಬುದು ಈ ನ್ಯಾಯಾಲಯದ ಗಣನೆಗೆ ಬರುತ್ತದೆ. ಆದುದರಿಂದ ನಿಪಿ 6 ರ ದಾಖಲೆಯು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಎಲ್ಲಾ ಸದಸ್ಯರು ಕೂಡಿ ಮಾಡಿಕೊಂಡ ವಿಭಾಗ ಪತ್ರ ಆಗದೇ ಇರುವುದರಿಂದ ಸದರಿ ವಿಭಾಗ ಪತ್ರವು ಒಟ್ಟು ಕುಟುಂಬದ ಕೆಲವೇ ಸದಸ್ಯರ ನಡುವೆ ಆದ ವಿಭಾಗ ಪತ್ರವಾಗಿರುವುದರಿಂದ ಸದರಿ ವಿಭಾಗ ಪತ್ರವು ರದ್ದುಪಡಿಸಲು

ಯೋಗ್ಯವಾಗಿರುತ್ತದೆ ಎಂಬುದಾಗಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಆದುದರಿಂದ ಸದರಿ ಅಂಶ 1 ಮತ್ತು 2 ಕ್ಕೆ ಈ ನ್ಯಾಯಾಲಯವು **ಸಕಾರಾತ್ಮಕವಾಗಿ** ಉತ್ತರಿಸುತ್ತದೆ.

9. **ಅಂಶ ಸಂಖ್ಯೆ** :3: ದಾವಾ ಶೆಡ್ಯೂಲ್ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದಂತಹ ಮತ್ತು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ವಾದಿಯು ಸಮಾನ ಭಾಗಾಂಶವನ್ನು ಮತ್ತು ಪ್ರತ್ಯೇಕ ಸ್ವಾಧೀನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಪಿತ್ರಾರ್ಜಿತ ಆಸ್ತಿಗಳಿಗೆ ಸಂಬಂಧಿಸಿದಂತೆ ಹಿಂದೂ ಉತ್ತರಾಧಿಕಾರ ತಿದ್ದುಪಡಿ ಅಧಿನಿಯಮ 2005 ರ ಕಲಂ 6 ರಲ್ಲಿ ತಿಳಿಸಿರುವಂತೆ ಹಾಗೂ ಈ ಸಂಬಂಧವಾಗಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ವಿನೀತಶರ್ಮ ಮತ್ತು ರಾಕೇಶ ಶರ್ಮ ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಹೆಣ್ಣು ಮಕ್ಕಳು ತಮ್ಮ ಹುಟ್ಟಿನಿಂದಲೇ ಗಂಡು ಮಕ್ಕಳಿಗೆ ಸಮಾನವಾದ ಭಾಗಾಂಶವನ್ನು ಮತ್ತು ಪ್ರತ್ಯೇಕ ಸ್ವಾಧೀನವನ್ನು ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಆಸ್ತಿಗಳಲ್ಲಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ ಎಂಬುದಾಗಿ ತಿಳಿಸಿರುವುದರಿಂದ ವಾದಿಯು ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ಸಮಾನ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಆದುದರಿಂದ ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ವಾದಿಯು 1/5 ಭಾಗಾಂಶವನ್ನು ಮತ್ತು ಪ್ರತ್ಯೇಕ ಸ್ವಾಧೀನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಹಾಗೆಯೇ ಪ್ರತಿವಾದಿ 1, 3 ಹಾಗೂ 4 ರವರು ಸಹ ದಾವಾ ಆಸ್ತಿಗಳಲ್ಲಿ ತಲಾ 1/5 ಭಾಗಾಂಶವನ್ನು ಮತ್ತು ಪ್ರತ್ಯೇಕ ಸ್ವಾಧೀನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಹೆಂಡತಿಯಾಗಿದ್ದು, ದಾವಾ ಆಸ್ತಿಗಳು ಬಾಂಬೆ ಕರ್ನಾಟಕ ವ್ಯಾಪ್ತಿಗೆ ಬರುವುದರಿಂದ **ಮಾನ್ಯ ಸರ್ವೋಚ್ಚ ನ್ಯಾಯಾಲಯವು ಗುರುಪಾದ ಕಂಡಪ್ಪ ಮಗದುಮ್ ವಿರುದ್ಧ ಹೀರಾಬಾಯಿ ಕಂಡಪ್ಪ ಮಗದುಮ್ ಮತ್ತು ಇತರರು**

ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಹೆಂಡತಿಯೂ ಸಹ ಭಾಗಾಂಶವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಆದುದರಿಂದ 2 ನೇ ಪ್ರತಿವಾದಿಯು ಸಹ ದಾವಾ ಆಸ್ತಿಗಳಲ್ಲಿ 1/5 ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಹಾಗೆಯೇ ಈಗಾಗಲೇ ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿ 1, 3 ಹಾಗೂ 4 ರವರ ನಡುವೆ ದಿನಾಂಕ 23.09.2017 ರಂದು ಆದಂತಹ ವಿಭಾಗ ಪತ್ರವು ವಾದಿಗೆ ಮತ್ತು 2 ನೇ ಪ್ರತಿವಾದಿಯ ಭಾಗಾಂಶದ ಹಕ್ಕಿಗೆ ಭಾಧ್ಯಪಡಿಸಿರುವುದಿಲ್ಲ ಎಂಬುದಾಗಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಆದುದರಿಂದ ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ನಿಪಿ 6 ರ ದಾಖಲೆಯು ಸಂಪೂರ್ಣವಾಗಿ ಒಟ್ಟು ಕುಟುಂಬದ ಸದಸ್ಯರ ನಡುವೆ ಆಗದೇ ಇರುವುದರಿಂದ ಸದರಿ ನಿಪಿ 6 ರ ದಾಖಲೆಯು ರದ್ದುಪಡಿಸಲು ಯೋಗ್ಯವಾಗಿರುತ್ತದೆ ಎಂಬುದಾಗಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟು,ಸದರಿ ಅಂಶ 3 ಕ್ಕೆ **ಸಕಾರಾತ್ಮಕವಾಗಿ** ಉತ್ತರಿಸಿದೆ.

10. **ಅಂಶ ಸಂಖ್ಯೆ**:3: ಈ ಮೇಲ್ಕಂಡ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ, ಅಂತಿಮ ಆದೇಶ ಈ ಕೆಳಕಂಡಂತೆ .

## ಆದೇಶ

ವಾದಿ ಸಲ್ಲಿಸಿರುವ ಈ ದಾವೆಯನ್ನು ಖರ್ಚಿನೊಂದಿಗೆ ಪ್ರಾಥಮಿಕ ಡಿಕ್ರಿ ಮಾಡಲಾಗಿದೆ.

ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ವಾದಿಯು 1/5 ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ಪ್ರತಿವಾದಿ 1 ರಿಂದ 4 ರವರು ತಲಾ 1/5 ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ಪ್ರತಿವಾದಿ 1, 3 ಹಾಗೂ 4 ರವರ ನಡುವೆ ದಾವಾ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ಹಿಂದೆ ದಿನಾಂಕ 23.09.2017 ರಂದು ಆದ ನೋಂದಾಯಿತ ವಿಭಾಗ ಪತ್ರವನ್ನು ಈ ನ್ಯಾಯಾಲಯವು ಅಸಿಂಧು ಎಂದು ಘೋಷಿಸಿ ರದ್ದುಪಡಿಸಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ.

( ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ಕೊಟ್ಟು ಅವರು ಗಣಕಯಂತ್ರದ ಮೂಲಕ ಲಿಪ್ಯಂತರ ಮಾಡಿದ ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿಈ ದಿನ ಅಂದರೆ ದಿನಾಂಕ ***30 ನೇ ಅಕ್ಟೋಬರ್*** *2021* ರಂದು ಘೋಷಿಸಿದ್ದೇನೆ.)

**(ಯೋಗೇಶ ಜೆ.)**
**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**
**1 ನೇ ಜೆಎಂಎಫ್‌ಸಿ, ರಾಣೇಬೆನ್ನೂರು.**

## ಅನುಬಂಧ

### ವಾದಿಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:

ಫ್ರಾಸಾ 1 : ವೀಣಾ ಕೋಂ ರಾಜು ಹಾದಿಮನಿ

### ವಾದಿಯ ಪರ ಗುರ್ತಿಸಲ್ಪಟ್ಟ ದಾಖಲೆಗಳ ಪಟ್ಟಿ:

ನಿಪಿ 1 ರಿಂದ 3: ಮೂರು ಗಣಕೀಕೃತ ಪಹಣಿಗಳು
ನಿಪಿ 4 & 5 : ದೃಢೀಕರಣ ಪತ್ರಗಳು

ನಿಪಿ 6 : ದಿ.23.09.2017 ರ ನೋಂದಾಯಿತ ಕ್ರಯ ಪತ್ರದದ ದೃಢೀಕೃತ ನಕಲು

ನಿಪಿ 7 : ವಂಶ ವೃಕ್ಷ

ನಿಪಿ 8 : ಶಾಲಾ ದಾಖಲಾತಿ ಪತ್ರ

**ಪ್ರತಿವಾದಿಗಳ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿಃ**

--ಇಲ್ಲ--

**ಪ್ರತಿವಾದಿಗಳ ಪರ ಗುರ್ತಿಸಲ್ಪಟ್ಟ ದಾಖಲೆಗಳ ಪಟ್ಟಿಃ**

--ಇಲ್ಲ--

Sd/-

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**

**1 ನೇ ಜೆಎಂಎಫ್‌ಸಿ, ರಾಣೇಬೆನ್ನೂರು.**